ಮಧುಮತಿ ಅಭಿಷೇಕ್, ಚಿತ್ರದುರ್ಗ

ಆಕಾಶದಲ್ಲಿರುವ ನಕ್ಷತ್ರಗಳಿಗೂ, ಜ್ಯೋತಿಷ್ಯದಲ್ಲಿರುವ ನಕ್ಷತ್ರಗಳಿಗೂ ಇರುವ ವ್ಯತ್ಯಾಸವೇನು?



ಆ ನಕ್ಷತ್ರಗಳು ಸ್ವಚ್ಛಂದವಾಗಿ ಮಿನುಗುತ್ತವೆ; ಈ ನಕ್ಷತ್ರಗಳು ಜ್ಯೋತಿಷಿಗಳ ಪಟ್ಟಿಗೆ ಸಿಲುಕಿ ಮುಲುಗುತ್ತವೆ.

ದಿನೇಶ್, ಗುಡ್ಡದೂರು

ಕೊರೊನಾಗೂ ರಾಜಕಾರಣಿಗೂ ಏನು ವ್ಯತ್ಯಾಸ?

ಕೊರೊನಾ ಪೀಡೆಯಿಂದ ತಪ್ಪಿಸಿಕೊಳ್ಳಲು ವ್ಯಾಕ್ಸಿನ್ ಉಂಟು.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು

ನಾವು ಮೋಸ ಹೋದರೂ ದುಃಖ ಆಗದಿರುವುದು ಯಾವಾಗ?

ಅದೇ ಬಾಬ್ತಿನಲ್ಲಿ ನಮ್ಮ ವೈರಿ ಇನ್ನೂ ಹೆಚ್ಚು ಮೋಸ ಹೋದಾಗ.

ಶೃತಿ ರಿಗ್ರೆಟ್ ಐಯ್ಯರ್, ಬೆಂಗಳೂರು

ಕುಡುಕ ಕುಡಿದಾಗ ನಿಜ ಹೇಳುತ್ತಾನೆ ಎನ್ನುತ್ತಾರೆ. ಇದು ನಿಜಾನಾ?



'ಎಷ್ಟು ಕುಡಿದೆ?' ಎಂದಾಗ ಮಾತ್ರ 'ಸ್ವಲ್ಪಾನೇ ಗುರೂ...' ಎಂದು ಸುಳ್ಳೇ ಹೇಳುವುದು.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ವಜ್ರ, ವೈಡೂರ್ಯ ಇತ್ಯಾದಿಗಳು ಬಂಗಾರಕ್ಕಿಂತ ಬೆಲೆಯುಳ್ಳವಾದರೂ ಮಕ್ಕಳನ್ನು ಬಂಗಾರ ಎಂದೇ ಕರೆವರಲ್ಲ?

ಹೇಳಿದ ಮಾತು ಕೇಳದಿದ್ದಾಗ ಮಧ್ಯೆ 'ಡಾಯ' ಸೇರಿಸಿ ಬಂಡಾಯಗಾರ ಎನ್ನಲು ಅದೊಂದೇ ಸರಿ.

ಸುಂದರ್ ಜಿ.ಕೆ. ಊರಿಲ್ಲ

ವಾಸ್ತುಶಾಸ್ತ್ರದ ಪ್ರಕಾರ ಹೆಂಡತಿ ಗಂಡನ ಬಲಗಡೆ ಮಲಗಬೇಕೋ ಎಡಗಡೆಯೋ?

ದಕ್ಷಿಣಕ್ಕೆ ತಲೆ, ಉತ್ತರಕ್ಕೆ ಕಾಲಿಟ್ಟ ಪತಿಗೆ ಸತಿ ದೇವಿಯಾದ್ದರಿಂದ ಈಶಾನ್ಯ – ಕಾಲದೆಸೆಯಲ್ಲಿ ಮಲಗಬೇಕು!

ರತ್ನಾ ಕೊರವರ, ನವಲುಗುಂದ

ನಮ್ಮ ಕಾಂಪೌಂಡಿನಲ್ಲಿ ಕಾಗೆಯೊಂದು ಹಾಕಿದ ಅನ್ನವನ್ನು ಬಳಗ ಕರೆಯದೆಯೇ ತಿಂದುಬಿಟ್ಟಿತಲ್ಲ?

ಅಕಟಕಟಾ! ಪ್ರಾಣಿಪಕ್ಷಿಗಳು ಅನ್ನದಾತರ ಗುಣವನ್ನೇ ಅನುಕರಿಸುತ್ತವೆಂಬ ಮಾತು ನಿಜವಾಯಿತೆನಿಸುತ್ತೆ!

ರಾಜೀವ್ ಎನ್. ಮಾಗಲ್, ಸಕಲೇಶಪುರ

ವಿಶ್ವ ಹೃದಯ ದಿನ ಇರುವಂತೆ ವಿಶ್ವ ಮೆದುಳು ದಿನ ಆಚರಣೆ ಮಾಡಬಹುದೆ?

ಬೇಡ. ಮೆದುಳು ಇದ್ದವರು ಅನವಶ್ಯಕ ಖರ್ಚು ಮಾಡರು; ಇಲ್ಲದವರು ಆಚರಿಸುವುದು ವ್ಯರ್ಥ.

ವಿ. ಹೇಮಂತಕುಮಾರ್, ಬೆಂಗಳೂರು

ಹೆಣ್ಣುಮಕ್ಕಳಿಗೆ ಒಳ್ಳೆಯ ಪತಿ ಸಿಗಲೆಂದು ಪೂಜೆ ಮಾಡುತ್ತಾರೆ. ಗಂಡುಮಕ್ಕಳಿಗೆ ಒಳ್ಳೆಯ ಸತಿ ಸಿಗಬೇಕಾದರೆ?

ಮುಂಚೆ ಅಗತ್ಯವಿಲ್ಲ, ಮದುವೆಯಾದ ನಂತರ ಸತಿಪೂಜೆ ಮಾಡದಿದ್ದರೆ ಖಗ್ರಾಸ ಗ್ರಹಣ ಖಚಿತ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಸಣ್ಣವಯಸ್ಸಿನವರು ಸತ್ತರೆ ಸಾಯುವ ವಯಸ್ಸಲ್ಲ ಎನ್ನುವರು. ಸಾಯಲು ಸರಿಯಾದ ವಯಸ್ಸೆಷ್ಟು?

'ಹೇಗಿದ್ದೀರಿ?' ಎನ್ನದೆ 'ಏಕಿದ್ದೀರಿ?' ಎನ್ನಿಸಿಕೊಂಡ ದಿನವೇ ರಿಟರ್ನ್ ಟಿಕೆಟ್ ಪಡೆವ ವಯಸ್ಸು.

ಹರಿತಸ, ಬೆಂಗಳೂರು

ಕೆಲ ಮದುವೆಗಳಲ್ಲಿ ವರನಿಗೆ ಕುದುರೆಯ ಮೆರವಣಿಗೆ ಮಾಡುವರು. ಕನ್ಯಾಮಣಿಗೆ ಏಕಿಲ್ಲ?

ಅವಳು ಕುದುರೆ ಏರುತ್ತಿದ್ದಂತೆಯೇ ಇನ್ನಾರಾದರೂ ಹಾರಿ ಕುಳಿತು ಹಾರಿಸಿಕೊಂಡು ಹೋಗಿ ಬಿಟ್ಟಾರೆಂಬ ಭಯ.

ಚಾಪಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರ್

ಪುರುಷರು ಸ್ತ್ರೀಯರ ಉಡುಪಿನ ಬಗ್ಗೆ ಬಹಳ ತಲೆ ಕೆಡಿಸಿಕೊಂಡಿದ್ದಾರಲ್ಲಾ, ಏಕೆ?

ಅದು ಹರಿದಿರುವುದೋ, ಹರಿದು ಕೊಂಡಿರುವುದೋ, ಹೊಲಸೋ, ಹೊಲಿಸಿದ್ದೋ ತಿಳಿಯುತ್ತಿಲ್ಲವಂತೆ.

## ವಾರದ ಪ್ರಶ್ನೆ

ಅಶೋಕ್ ಹಾಲಣ್ಣವರ, ಲಕ್ಷ್ಮೇಶ್ವರ

ಭೂಲೋಕದಲ್ಲಿ ಮಾಂಸಾಹಾರ ಕೊಡುವ ಮರ ಬೆಳೆಯುವಂತಿದ್ದರೆ ಹೇಗಿರುತ್ತಿತ್ತು ಸರ್‌ಜಿ?

ಬೇಕೆಂದೇ ಕಾಲ್ಗಿಚ್ಚು ಹಬ್ಬಿಸಿ 'ನಿಂತಲ್ಲೇ ಮೀಲ್ಸ್' ಪಡೆಯುವವರು ಹೆಚ್ಚಾಗುತ್ತಿದ್ದರು.

ನರಸಿಂಹಾರೆಡ್ಡಿ, ಸೇಡಂ

ಮನುಷ್ಯನಿಗೆ ಹಣ ಮುಖ್ಯಾನಾ, ಗುಣ ಮುಖ್ಯಾನಾ ಗುರುಗಳೆ?

ಹಣ ಬಂದಾಗಲೂ ಬದಲಾಗದಂತೆ ಕಾಪಾಡಿಕೊಂಡ ಸದ್ಗುಣ.

ಶೇಷರಾಜ್, ಬೆಂಗಳೂರು

ದೇ ವ ರು ಎಂದರೆ ದೇಹವಿಲ್ಲದ; ವರ್ಣವಿಲ್ಲದ; ರೂಪವಿಲ್ಲದವ ಎನ್ನುತ್ತಾರೆ. ನಿಜವೆ?

ರು ಬದಲು ರೂ ಇದೆಯಲ್ಲ: ದೇ– ದೀಪ್ಯಮಾನ; ವ–ರ್ಣರಂಜಿತ; ರು–ಚಿ (ರುಚಿ: ಬೆಳಕು, ಸೌಂದರ್ಯ) ಎನ್ನಿ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಗಡಿಯಾರದ ಮುಳ್ಳಿಗೂ, ಗುಲಾಬಿಯ ಮುಳ್ಳಿಗೂ ಏನು ವ್ಯತ್ಯಾಸ?




ಗುಲಾಬಿಯದು ಹೆಚ್ಚೆಂದರೆ ಚುಚ್ಚುತ್ತದೆ; ಗಡಿಯಾರದ್ದು ಪ್ರತಿ ಕ್ಷಣವೂ ನಿಮ್ಮ ಆಯುಸ್ಸನ್ನು ತಗ್ಗಿಸುತ್ತದೆ.

ಬಿ.ಆರ್. ಉಷಾ, ಬೆಂಗಳೂರು

ಹೊಂಡಕ್ಕೂ ಹೆಂಡಕ್ಕೂ ಇರುವ ಸಂಬಂಧ ಏನು?

ಹೆಂಡ ಕಿಕ್ ಮಾಡಿದವರಿಗೆ ಹೊಂಡ ವಸತಿ ಸೌಕರ್ಯ ಒದಗಿಸುತ್ತದೆ.

ಕವಿತಾ ವೆಂಕಟೇಶ್, ಊರಿಲ್ಲ

ಗ್ರಹಣವನ್ನು ವೈಜ್ಞಾನಿಕವಾಗಿ ನಂಬಲು ಸಾಧ್ಯ. ಗ್ರಹಚಾರವನ್ನು ಯಾವ ಕಾರಣಕ್ಕೆ ನಂಬಬಹುದು?

ಮೌಢ್ಯವೆಂಬ ಪರಂಪರಾಗತ ಆಚರಣೆಯ ಕಾರಣ.

■ ರಾಮ್